ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜೋನಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್, ಬೆಂಗಳೂರು-86,

# ದಿನಾಂಕ:-03-12-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ಹಾಗು ಹೊಸ ವಾರ್ಡ್ ಸಂಖ್ಯೆ:51ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ:ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್/55/2022-23 ದಿನಾಂಕ:01-12-2022

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ಕೇಶವ ಮೂರ್ತಿ | ಸಹಾಯಕ ನಿರ್ದೇಶಕರು ನಗರ ಯೋಜನೆ, ಬಿ.ಬಿ.ಎಂ.ಪಿ. |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರರು, ವಾರ್ಡ್-67. |
| 3. | ಶ್ರೀ. ಉದಯಶಂಕರ್ | 1ನೇ ಆರ್ ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಹಾಗು ವಾರ್ಡ್ ಸಮಿತಿ ಸದಸ್ಯರು. |
| 4. | ಶ್ರೀಮತಿ. ಗೀತಾ ಕಿನಾಲ್ | ವಾರ್ಡ್ ಸಮಿತಿ ಸದಸ್ಯರು. |
| 5. | ಶ್ರೀಮತಿ. ಮಂಜುಳ | ವಾರ್ಡ್ ಸಮಿತಿ ಸದಸ್ಯರು. |
| 6. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67. |
| 7. | ಶ್ರೀ. ಗುರುಮೂರ್ತಿ | ಫ.ತ್ಯಾನಿ ಪರೀವಿಕ್ಷರು. |
| 8. | ಶ್ರೀ. ಹರೀಶ್. ಡಿ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್. ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 9. | ಶ್ರೀ. ರಾಮಾನಜನಪ್ಪ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್. ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 10. | ಶ್ರೀ. ಶಂಕರ ಎಸ್. ಎನ್ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್. ಮಹಾಲಕ್ಷ್ಮೀಲೇಔಟ್ ಸಂಚಾರಿ ಪೊಲೀಸ್ ಠಾಣೆ. |
| 11. | ಶ್ರೀ. ಗುರು ಎಸ್ | ಹಸಿರು ದಳ ಪರಿವಿಕ್ಷಕರು. |
| 12. | ಶ್ರೀ. ರಮೇಶ್ ಟಿ. ಎನ್ | ಹಸಿರು ದಳ ಪರಿವಿಕ್ಷಕರು. |
| 13. | ಶ್ರೀ. ಗಿರೀಶ್ | ಕೆಲಸ ಪರಿವಿಕ್ಷರು, ಬೆ.ಒ.ಮಂ |
| 14. | ಶ್ರೀ. ಶ್ರೀನಿವಾಸಲು | ಕೆಲಸ ಪರಿವಿಕ್ಷರು, ಬೆ.ಒ.ಮಂ |
| 15. | ಶ್ರೀ. ಮಂಜುನಾಥ್. | ತೋಟಗಾರಿಕೆ ಇಲಾಖೆ, ಮೇಸ್ತ್ರೀ. |
| 16. | ಶ್ರೀ. ರಾಜೇಶ್ | ಕಂದಾಯ ಪರೀವಿಕ್ಷಕರು. |
| 17. | ಶ್ರೀ. ಪುಟ್ಟಸ್ವಾಮಿ | ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ |



ಮು.ತಿ.ನೋ.

Scanned by CamScanner

| | | |
|---|---|---|
| 18. | ಸಹಾಯಕ ಅಭಿಯಂತರರು, ಬೋರ್‌ವೆಲ್ ನಿರ್ವಹಣೆ. | ಗೈರು ಹಾಜರಿ. |
| 19. | ಕಿರಿಯ ಆರೋಗ್ಯ ಪರೀವಿಕ್ಷಕರು | ಗೈರು ಹಾಜರಿ. |
| 20. | ಸುಬ್ರಮಣ್ಯನಗರ ಪೋಲಿಸ್ ಠಾಣೆ. | ಗೈರು ಹಾಜರಿ. |
| 21. | ಅರಣ್ಯಾಧಿಕಾರಿಗಳು | ಗೈರು ಹಾಜರಿ. |
| 22. | ಕಿರಿಯ ಆರೋಗ್ಯ ಪರೀವಿಕ್ಷಕರು | ಗೈರು ಹಾಜರಿ. |
| 23. | ವಾರ್ಡ್ ಮಾರ್ಷಲ್ | ಗೈರು ಹಾಜರಿ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಸೆಪ್ಟೆಂಬರ್ ಮಾಹೆಯ ದಿ: 03/12/2022 ರಂದು ಬೆಳ್ಳಿಗೆ 9:30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>**

| | |
|---|---|
| ಶ್ರೀಮತಿ. ಗೀತಾ ಕಿನಾಲ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ 19ನೇ 'ಇ' ಮೈನ್‌ನಲ್ಲಿ ಚಪ್ಪಡಿ ಕಲ್ಲುಗಳು ಹಲವು ಕಡೆ ಹಾಳಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ್–67 | ವಾರ್ಡ್‌ನ ರಾಜಾಜಿನಗರ 1ನೇ ಎನ್ ಬ್ಲಾಕ್‌ನ 19ನೇ ಇ ಮೈನ್‌ನ ಚಪ್ಪಡಿ ಕಲ್ಲುಗಳನ್ನು ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಉದಯಶಂಕರ್ 1ನೇ ಆರ್ ಬ್ಲಾಕ್ ಕ್ಷೇಮಾಭಿವೃಧ್ಧಿ ಸಂಘದ ಅಧ್ಯಕ್ಷರು ಹಾಗು ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಹರೇ ಕೃಷ್ಣ ಉದ್ಯಾನದ ಹತ್ತಿರ ಸ್ಕೈ ವಾಕ್‌ನಲ್ಲಿ ರಾತ್ರಿ ವೇಳೆ ದೀಪ ಬೆಳಗುತ್ತಿರುವುದಿಲ್ಲ ಇದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಮಂಜುಳ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 'ಕೆ' ಬ್ಲಾಕ್‌ನಲ್ಲಿ ನೀರಿನ ಸಮಸ್ಯೆ ಹಾಗು ರಸ್ತೆಗಳ ಡಾಂಬರಿಕರಣ ಮಾಡಲು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ನೀರಿನ ಸಮಸ್ಯೆ ಬಗ್ಗೆ ಬೆಂ. ಜಲ ಮಂಡಳಿಯವರು ಕ್ರಮವಹಿಸಲು ಸೂಚಿಸಿದರು ಹಾಗು ರಸ್ತೆಗಳ ಡಾಂಬರಿಕರಣ ಮುಂದಿನ ದಿನಗಳಲ್ಲಿ ಮಾಡಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |



3/12/22

ಪು.ತಿ.ನೋ.

Scanned by CamScanner

| | |
|---|---|
| ಶ್ರೀಮತಿ. ಗೀತಾ ಕಿನಾಲ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 19ನೇ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಕೇಶವಮೂರ್ತಿ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ರಸ್ತೆ ಗುಂಡಿಯನ್ನು 3 ದಿನಗಳೊಳಗೆ ತಾಂತ್ರಿಕವಾಗಿ ಮುಚ್ಚಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. |
| ಶ್ರೀಮತಿ. ಗೀತಾ ಕಿನಾಲ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಸುತ್ತಮುತ್ತಲು ಒಣಗಿರುವ ಮರಗಳ ರೆಂಬೆಗಳನ್ನು ಟ್ರೀಂಮಿಂಗ್ ಮಾಡಲು ಸಭೆಯಲ್ಲಿ ತಿಳಿಸಿದರು. |
| ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಿಗೆ ಹಾಗು ಬೀದಿ ದೀಪಗಳಿಗೆ ಮರದ ರೆಂಬೆಗಳು ಅಡವಾಗಿದ್ದು, ಮರಗಳ ರೆಂಬೆಗಳನ್ನು ಟ್ರೀಂಮಿಂಗ್ ಮಾಡಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಕೇಶವಮೂರ್ತಿ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಅರಣ್ಯ ಇಲಾಖೆಯವರು ಹಿಂದಿನ ಸಭೆಗೆ ಳಿಗೆ ಹಾಗು ಈ ದಿನದ ಸಭೆಗೂ ಗೈರು ಹಾಜರಿದ್ದು ಆರ್.ಎಫ್.ಒ ರವರು ಸೂಕ್ತ ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್–67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

**ಪ್ರತಿಯನ್ನು**

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

03/12/22

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು, ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

3/12/22

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**



ಮು.ತಿ.ನೋ.

Scanned by CamScanner